SRI M. MALLIKARJUNASWAMY.—I think it is left to the sweet will of the Commission.

APPLIED NUTRITION PROGRAMME AT SIRA

219. SRI T. TAREGOWDA (Kallambella).—Will the Minister for Community Development and Social Welfare be pleased to state.—

(*a*) whether Applied Nutrition Scheme (Applied Nutrition Programme) has been sanctioned to Sira Taluk which is drought affected taluk in the year 1972—73 ;

(*b*) if not, the steps taken by the Government to sanction Scheme as early as possible ?

SRI M MALLIKARJUNASWAMY (Minister for Community Development and Social Welfare).—

(*a*) No.

(*b*) Selection of blocks for the current year is already over. Sira taluk would be kept in view, while alloting fresh ANP blocks in future.

ಶ್ರೀ ಟಿ. ತಾರೇಗೌಡ.—ಸಿರಾ ತಾಲ್ಲೂಕ್ ಪದೇ ಪದೇ ಆಭಾವಕ್ಕೆ ತುತ್ತಾಗುತ್ತಿರುವುದರಿಂದ ಈ ಸ್ಕೀಮನ್ನು ಅಲ್ಲಿಗೆ ಕೊಡಬೇಕೆಂದು ಪದೇಪದೇ ತಾಲ್ಲೂಕ್ ಬೋರ್ಡಿನವರು ಕೇಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ? ಬಂದಿದ್ದರೆ ಏ ಂದಿನ ಸಲವಾದರೂ ಕೊಡಲಾಗುತ್ತದೆಂಬ ಭರವಸೆ ಕೊಡುತ್ತೀರಾ?

†ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಇದು ಭರವಸೆ ಕೊಡುವ ಪ್ರಶ್ನೆಯಲ್ಲ. ಏಕೆಂದರೆ ಸಿರಾ ತಾಲ್ಲೂಕ್ ಒಂದೇ ಅಲ್ಲ, ಪದೇಪದೇ ಬರಗಾಲಕ್ಕೆ ತುತ್ತಾಗುತ್ತಿರುವುದು. ಈ ವರ್ಷ ೭ ಬ್ಲಾಕ್‌ಗಳಿಗೆ ಈ ಯೋಜನೆಗಳನ್ನು ಕೊಟ್ಟಿದ್ದೇವೆ. ಆದರೂ ಸಿರಾ ತಾಲ್ಲೂಕನ್ನು ಸರ್ಕಾರ ಗಮನದಲ್ಲಿಟ್ಟುಕೊಂಡು ಪರಿಶೀಲನೆ ಮಾಡುತ್ತದೆ.

ಶ್ರೀ ಟಿ. ತಾರೇಗೌಡ.—ಸಿರಾ ತಾಲ್ಲೂಕ್‌ನ ಬೇವಿನಹಳ್ಳಿಗೆ ತಾವು ಒಂದು ಸಮಾರಂಭಕ್ಕೆ ಬಂದಿದ್ದಾಗ ಮುಂದಿನ ಸಾರಿ ಈ ಯೋಜನೆಯನ್ನು ಖಂಡಿತವಾಗಿ ಕೊಡುತ್ತೇನೆಂದು ಭರವಸೆ ಕೊಟ್ಟಿರಲಿಲ್ಲವೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಮುಂದಿನ ಸಲ ಕೊಡುತ್ತೇನೆಂದು ಹೇಳಿರುವುದನ್ನು ಪರಿಶೀಲನೆ ಮಾಡಲಾಗುತ್ತದೆ. ಕೇಂದ್ರ ಸರ್ಕಾರದವರಂ ೮ ಪ್ರೋಗ್ರಾಂಗಳನ್ನು ಕೊಟ್ಟಿದ್ದರು. ಅದನ್ನು ಕೊಟ್ಟಿದ್ದೇವೆ. ಪುನಃ ೧೯೭೪–೭೫ರಲ್ಲಿ ಕೇಂದ್ರ ಸರ್ಕಾರದವರು ಕೊಟ್ಟಾಗ, ಸಿರಾ ತಾಲ್ಲೂಕನ್ನು ಗಮನದಲ್ಲಿಟ್ಟುಕೊಂಡು ಪರಿಶೀಲನೆ ಮಾಡುತ್ತೇವೆ.

COMMITTEE TO SELECT SITE FOR LOCATING NEW UNIVERSITY

250. SRI BAPU GOWDA RAYAPPA (Shahapur).— Will the Minister for Education be pleased to state.—

(*a*) whether the Government has constituted any committee to select the place or the location of the new university,

(*b*) if so, the plac recommended by the Committee,

SRI A. R. BADARINARAYAN (Minister for Education) —

(*a*) No However a committee has been constituted to consider the establishment of more universities in the State. Its report is awaited

(*b*) Does not arise in view of the above reply.

ಶ್ರೀ ಬಾಪುಗೌಡ ರಾಯಪ್ಪ.—ನನ್ನ ಮೊದಲನೆಯ ಪ್ರಶ್ನೆಗೆ ಇಲ್ಲ ಎಂದು ಉತ್ತರ ಕೊಟ್ಟು ನಂತರ ಆದಾಗ್ಯೂ ರಾಜ್ಯದಲ್ಲಿ ಹೆಚ್ಚು ವಿಶ್ವವಿದ್ಯಾನಿಲಯಗಳನ್ನು ಸ್ಥಾಪನೆ ಮಾಡುವುದಕ್ಕೆ ಸಂಬಂದಿಸಿದಂತೆ ಸಮಿತಿಯೊಂದನ್ನು ರಚಿಸಲಾಗಿದ್ದು ಅವರ ವರದಿಯನ್ನು ನಿರೀಕ್ಷಿಸಲಾಗಿದೆ ಎಂದು ಹೇಳಿರುತ್ತೀರಿ. ಈ ಸಮಿತಿಯವರು ಏನಾದರೂ ಇಂಟೀರಿಯಮ್ ರಿಪೋರ್ಟು ಏನಾದರೂ ಕೊಟ್ಟಿದ್ದಾರೆಯೇ ? ಕೊಟ್ಟಿದ್ದರೆ ಕಲ್ಬುರ್ಗಿಯಲ್ಲಿ ಒಂದು ವಿಶ್ವವಿದ್ಯಾನಿಲಯವಾಗಬೇಕೆಂದು ಅಭಿಪ್ರಾಯ ಕೊಟ್ಟಿದ್ದಾರೆಯೇ ?

† ಶ್ರೀ ಎ. ಆರ್. ಬದರಿನಾರಾಯಣ.— ಯಾವ ಯಾವ ಸ್ಥಳಗಳಲ್ಲಿ ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸಬೇಕೆಂಬ ಬಗ್ಗೆ ಸಮಿತಿಯನ್ನು ರಚನೆ ಮಾಡಲಿಲ್ಲ. ನಮ್ಮ ರಾಜ್ಯದಲ್ಲಿ ಇನ್ನೂ ಹೊಸದಾಗಿ ವಿಶ್ವವಿದ್ಯಾಲಯಗಳನ್ನು ಸ್ಥಾಪನೆ ಮಾಡುವ ಆವಶ್ಯಕತೆ ಇದೆಯೇ ಎಂಬ ಬಗ್ಗೆ ಕಮಿಟಿ ರಚನೆ ಮಾಡಿದ್ದು. ಅವಶ್ಯಕತೆ ಇದೆ ಎಂದು ಕಂಡು ಬಂದರೆ, ಎಷ್ಟು ಆಗಬಹುದು, ಎಲ್ಲೆಲ್ಲಿ ಆಗಬಹುದು ಎಂಬುದನ್ನು ಆಮೇಲೆ ಯೋಚನೆ ಮಾಡಲಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.— ಅದಕ್ಕೆ ಬೇರೊಂದು ಕಮಿಟಿ ನೇಮಕ ಮಾಡುತ್ತೀರಾ?

ಶ್ರೀ ಎ. ಆರ್ ಬದರಿನಾರಾಯಣ.— ಕಮಿಟಿ ಏನೂ ಬೇಕಾಗುವುದಿಲ್ಲ. ಜನರ ಅಭಿಪ್ರಾಯ ತಿಳಿದು ಮಾಡಲಾಗುತ್ತದೆ. ಗಜೇಂದ್ರಗಡ್ಕರ ರಿಪೋರ್ಟಿನಲ್ಲಿ ಒಂದು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ೩೦ ಕಾಲೇಜುಗಳಿಗಿಂತ ಜಾಸ್ತಿ ಇರಬಾರದೆಂದು ಹೇಳಲಾಗಿದೆ. ಇದಕ್ಕಿಂತ ಜಾಸ್ತಿ ಕಾಲೇಜುಗಳಿದ್ದರೆ, ಎಫೆಕ್ಟೀವ್ ಆಗಿ ವಿದ್ಯಾಭ್ಯಾಸ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲವೆಂಬ ತೀರ್ಮಾನಕ್ಕೆ ಅವರು ಬಂದಿದಾರೆ ಮಂತ್ರಿ ನಾರಮ್ಸ್ ಇಟ್ಟುಕೊಂಡರೆ ೫೦ಕ್ಕಿಂತ ಹೆಚ್ಚು ಕಾಲೇಜುಗಳು ಇರಬಾರದೆಂದು ಹೇಳಿದ್ದಾರೆ. ಈ ಲೆಕ್ಕದ ಪ್ರಕಾರ ನೋಡುವುದಾದರೆ, ನಮ್ಮ ರಾಜ್ಯದಲ್ಲಿ ೩೦೦ ಕಾಲೇಜುಗಳಿರುವುದರಿಂದ, ೬ ವಿಶ್ವವಿದ್ಯಾನಿಲಯಗಳ ಅವಶ್ಯಕತೆ ಇದೆ ಎಂದು ಈ ನಮ್ಮ ಕಮಿಟಿಯವರು ತೀರ್ಮಾನಕ್ಕೆ ಬಂದಿದ್ದಾರೆ ಮಂತ್ರಿ ಅವರ ಒಂದು ವರದಿಯನ್ನು ಕೊಟ್ಟಿದ್ದಾರೆ. ಹೊಸದಾಗಿ ವಿಶ್ವವಿದ್ಯಾನಿಲಯಗಳನ್ನು ಸ್ಥಾಪನೆ ಮಾಡುವುದರಿಂದ ಆರ್ಥಿಕ ಪರಿಸ್ಥಿತಿ ಏನಾಗುತ್ತದೆ ಎಂಬುದನ್ನು ನೋಡಬೇಕಾಗುತ್ತದೆ. ಇದನ್ನು ಕ್ಯಾಬಿನೆಟ್‌ನಲ್ಲಿ ಮೊದಲು ಒಪ್ಪಬೇಕಾಗುತ್ತದೆ. ನಂತರ ಯೂನಿವರ್ಸಿಟಿ ಗ್ರಾಂಟ್ಸ್ ಕಮಿಷನ್ ಅವರು ಒಪ್ಪಬೇಕಾಗುತ್ತದೆ ಎಷ್ಟು ಹೊಸ ವಿಶ್ವವಿದ್ಯಾನಿಲಯಗಳನ್ನು ಸ್ಥಾಪನೆ ಮಾಡಬಹುದೆಂಬುದನ್ನು ತೀರ್ಮಾನ ಮಾಡಿದ ಮೇಲೆ ಎಲ್ಲಿ ಕೊಡಬೇಕೆಂಬ ಪ್ರಶ್ನೆ ಬರುತ್ತದೆ. ಈಗ ೩ ಜಾಗಗಳನ್ನು ಹೇಳಲಾಗಿದೆ. ಗುಲ್ಬರ್ಗ, ಮಂಗಳೂರು ಮತ್ತು ಶಿವಮೊಗ್ಗ ಈ ಮೂರು ಜಾಗಗಳಿಗೆ ಕೊಡಬೇಕೆಂಬ ಆಸೆ ಇದೆ. ಮುಂದೆ ಯಾವ ರೀತಿ ಆಗುತ್ತದೆ ಎಂಬುದನ್ನು ನೋಡಬೇಕಾಗಿದೆ.

ಶ್ರೀ ಬಾಪುಗೌಡ ರಾಯಪ್ಪ.— ತಾವು ಗುಲ್ಬರ್ಗದಲ್ಲಿ ಪ್ರವಾಸ ಮಾಡುವ ಕಾಲದಲ್ಲಿ ಗುಲ್ಬರ್ಗಕ್ಕೆ ಮೊದಲ ಆದ್ಯತೆ ಕೊಡುತ್ತೇವೆಂದು ಹೇಳಿದಿರಿ. ನಂತರ ಶಿವಮೊಗ್ಗದಲ್ಲಿ ಪ್ರವಾಸ ಮಾಡುವ ಕಾಲಕ್ಕೆ ಶಿವಮೊಗ್ಗಕ್ಕೆ ಕೊಡುತ್ತೇವೇದು ಹೇಳಿದಿರಿ. ಈರೀತಿ ತಾವು ಹೇಳಿರುವುದರಿಂದ ಮೊದಲ ಆದ್ಯತೆಯನ್ನು ಯಾವ ಜಾಗಕ್ಕೆ ಕೊಡುತ್ತೀರಾ ?

ಶ್ರೀ ಎ. ಆರ್. ಬದರಿನಾರಾಯಣ.— ಕೊಡುತ್ತೇನೆ, ಕೊಡುತ್ತೇನೆಂದು ಹೇಳುವುದಕ್ಕೆ ಅದು ನನ್ನ ಜೇಬಿನಲ್ಲಿ ಇಲ್ಲ ಗುಲ್ಬರ್ಗಕ್ಕೆ ಕೊಡುವ ಆವಶ್ಯಕತೆ ಇದೆ, ಜಾಗ ಚೆನ್ನಾಗಿದೆ, ಡೆವಲಪ್ ಆಗಿದೆ ಎಂಬ ಹೂತನ್ನು ನಾನು ಅಲ್ಲಿಗೆ ಬಂದಾಗ ಹೇಳಿದ್ದೆ. ಇಂತಹ ಕಡೆಗೆ ಕೊಡುತ್ತೇನೆಂದು ಹೇಳಿದರೆ I will be anticipating the decision of the Government and the University Grant Commission. ನಾನು ಅಷ್ಟೊಂದು ಬೇಜವಾಬ್ದಾರಿಯಾಗಿ ಯಾವುದನ್ನೂ ಹೇಳುವದಿಲ್ಲ. ಜಾಗ ಚೆನ್ನಾಗಿರುವುದರಿಂದ ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದೇನೆ.

ಶ್ರೀ ವಿಶ್ವನಾಥರೆಡ್ಡಿ.— ಈ ಗುಲ್ಬರ್ಗ ಜಿಲ್ಲೆ ಕ್ಷೇತ್ರದ ದೃಷ್ಟಿಯಿಂದ, ವಿಶಾಲ ಜಾಗದ ದೃಷ್ಟಿಯಿಂದ ಕೂಡಿರುವುದರಿಂದ ಅಲ್ಲಿ ಒಂದು ವಿಶ್ವವಿದ್ಯಾನಿಲಯದ ಅವಶ್ಯಕತೆ ಇದೆ ಎಂದು ತಾವು ಕಂಡುಕೊಂಡು ಅದನ್ನು ಪರಿಶೀಲನೆ ಮಾಡಲು ಒಂದು ಕಮಿಟಿಯನ್ನು ನೇಮಕ ಮಾಡಿದಿರಿ. ಈ ಕಮಿಟಿಯವರು

(ಶ್ರೀ ವಿಶ್ವನಾಥಕಡ್ಡಿ)

೩ ವಿಶ್ವವಿದ್ಯಾನಿಲಯಗಳನ್ನು ಹೊಸದಾಗಿ ಸ್ಥಾಪನೆ ಮಾಡಬಹುದೆಂದು ಹೇಳಿರುವುದರಿಂದ, ಪೂರನ್ನು ಸ್ಥಾಪನೆ ಮಾಡಲು ಸರ್ಕಾರದವರು ಆರ್ಥಿಕ ಪರಿಸ್ಥಿತಿಯು ಕಾರಣದಿಂದ ಇದನ್ನು ತಡೆಹಿಡಿಯುವ ಪ್ರಶ್ನೆ ಬರಬಹುದು. ಈ ಕಾರಣದಿಂದ ಮೊದಲು ಎಲ್ಲಿ ಸ್ಥಾಪನೆ ಮಾಡಬಹುದೆಂಬುದಕ್ಕಾದರೂ ವಿಚಾರ ಮಾಡಿ, ಕಲ್ಬುರ್ಗಿಗೆ ಮೊದಲ ಆದ್ಯತೆ ಕೊಡುವುದಕ್ಕೆ ಸಹಾನುಭೂತಿಯಿಂದ ವಿಚಾರ ಮಾಡುತ್ತೀರಾ?

ಶ್ರೀ ಎ. ಆರ್. ಬದರಿನಾರಾಯಣ್.—ಇದು ಊಹಾಪೋಹದ ಪ್ರಶ್ನೆಯಾಗಿದೆ. ಒಂದನ್ನು ಕೊಟ್ಟರೆ ಎಲ್ಲಿಗೆ ಕೊಡುತ್ತೀರಾ, ಎರಡು ಕೊಟ್ಟರೆ ಎಲ್ಲಿಗೆ ಕೊಡುತ್ತೀರಾ ಎಂದು ಕೇಳುವುದು ಊಹೆಯ ಪ್ರಶ್ನೆಯಾಗುತ್ತದೆ. ಮೊದಲು ಸ್ಥಾಪನೆ ಮಾಡುವುದು ತೀರ್ಮಾನವಾಗಲಿ, ನಂತರ ಎಲ್ಲಿಗೆ ಕೊಡಬೇಕೆಂಬುದನು ಯೋಚನೆ ಮಾಡೋಣ.

ಶ್ರೀ ಎಂ. ಎಸ್. ಕೃಷ್ಣನ್.— ಗಜೇಂದ್ರ ಗಡ್ಕರ್ ಆಯೋಗದ ವರದಿಯಲ್ಲಿ ೩೦ ಕಾಲೇಜುಗಳಿಗೆ ಒಂದು ವಿಶ್ವವಿದ್ಯಾನಿಲಯ ಇರಬೇಕೆಂದು ಅಭಿಪ್ರಾಯ ಇರಬೇಕಾಹರೆ, ತಾವು ಅದನ್ನು ೫೦ಕ್ಕೆ ಏರಿಸಿ ೭ ವಿಶ್ವವಿದ್ಯಾನಿಲಯಗಳು ಇದ್ದರೆ ಸಾಕು ಎಂದು ತೀರ್ಮಾನಕ್ಕೆ ಬರುವುದಕ್ಕೆ ಬಹಳಲು ೩೦ ಕಾಲೇಜುಗಳಿಗೆ ಒಂದು ವಿಶ್ವವಿದ್ಯಾನಿಲಯದಂತೆ ೧೦ ವಿಶ್ವವಿದ್ಯಾನಿಲಯಗಳನ್ನು ಏತಕ್ಕೆ ಸ್ಥಾಪನೆ ಮಾಡಲಾರದು.

ಶ್ರೀ ಎ. ಆರ್. ಬದರಿನಾರಾಯಣ್.— ೩೦ ಇರಬೇಕು, ೫೦ಕ್ಕಿಂತ ಜಾಸ್ತಿ ಇರಬಾರದೆಂದು ಅವರು ಅಭಿಪ್ರಾಯ ಪಟ್ಟಿದ್ದಾರೆ. ಮಾರ್ಜಿನ್ ಕೊಟ್ಟಿದ್ದಿರೆ ನಾವು ಈಗ ಪ್ರಾಥಮಿಕ ಶಿಕ್ಷಣಕ್ಕೆ ಮೊದಲ ಆದ್ಯತೆ ಕೊಡಬೇಕಾಗಿದೆ. ನಡ್ಮುಲ್ಲಿ ೬೯ ಪರ್ಸೆಂಟಿನಷ್ಟು ಅನಕ್ಷರಸ್ಥರು ಇರುವುದರಿಂದ ಪ್ರಾಥಮಿಕ ಶಿಕ್ಷಣಕ್ಕೆ ಮೊದಲ ಆದ್ಯತೆ ಕೊಡಬೇಕಾಗಿದೆ. ಎಲ್ಲರಿಗೂ ವಿದ್ಯಾಭ್ಯಾಸ ಕೊಡಲಾಗುತ್ತದೆಂದು ಕಾನ್ಸ್ಟಿಟ್ಯೂಷನ್ನಿನಲ್ಲಿ ಗ್ಯಾರಂಟಿ ಕೊಟ್ಟಿದ್ದೇವೆ. ಇದನ್ನೇ ನಾವು ಪೂರೈಕೆ ಮಾಡದಿರುವುದರಿಂದ ಹೊಸದಾಗಿ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡುವುದು ಅಗತ್ಯವಿದೆಯೇ ಎಂಬ ಪ್ರಶ್ನೆ ಬರುತ್ತದೆ. ಮುಂಖ್ಯವಾಗಿ ಹಣ ಒದಗಿದಾಗ ಇದನ್ನು ನೋಡಬೇಕಾಗುತ್ತದೆ.

TEACHERS UNDER TRAINING IN TEACHERS' TRAINING COLLEGE, GULBARGA

251. SRI BAPU GOWDA RAYAPPA (Shahapur).— Will the Minister for Education be pleased to state.—

(*a*) the number of teachers under training in Teachers Training College Gulbarga for B.Ed. ?

(*b*) whether these teachers have received their salary for the months of June and July, 1973,

(*c*) if not the reasons therefor?

SRI A. R. BADARINARAYAN (Minister for Education).

(*a*) 50 teachers.

(*b*) Yes.

(*c*) Does not arise.

ಶ್ರೀ ಬಾಪುಗೌಡ ರಾಯಪ್ಪ.—ನನ್ನ ಎರಡನೇ ಪ್ರಶ್ನೆಗೆ ಉತ್ತರವಾಗಿ ಹೌದು ಎಂದು ಹೇಳಿದ್ದೀರಿ. ಈ ಕಾಲೇಜಿನ ಉಪಾಧ್ಯಾಯರು ನನ್ನ ಹತ್ತಿರ ಖುದ್ದಾಗಿ ಬಂದು ಎರಡು ತಿಂಗಳ ಸಂಬಳ ಸಿಕ್ಕಿಲ್ಲ ಎಂದು ಹೇಳಿದ್ದರಿಂದ ಈ ಪ್ರಶ್ನೆಯನ್ನು ಕೇಳಿದ್ದು. ಆದರೆ ತಾವು ಕೊಡಲಾಗಿದೆ ಎಂದು ಹೇಳಿದ್ದೀರಿ ಆ ರೀತಿ ಕೊಟ್ಟಿದ್ದರೆ, ಸಂಬಳ ವಿತರಣೆ ಮಾಡಿರುವ ಪೇ-ರೋಲನ್ನು ಅಲ್ಲಿಯ ಪ್ರಿನ್ಸಿಪಾಲರಿಂದ ತರಿಸಿ ಸಭೆಯ ಮುಂದೆ ಇಡುತ್ತೀರಾ ?